# ಕಾಲದ ಮರು ಓದು

ಚಿತ್ರ ಬರಹ:
ನಾ. ಕಾರಂತ ಪೆರಾಜೆ



ಪತ್ರಿಕಾ ಸಂಗ್ರಹ ಪ್ರದರ್ಶನ




1969ರ ಸುಧಾ ಪತ್ರಿಕೆ ಮುಖಪುಟ



ವದ್ದ ವೆಂಕಟ್ರಮಣ ಭಟ್

**೧ ನವೆಂಬರ್ ೧೯೮೪ - ಪ್ರಧಾನಿ ಇಂದಿರಾ ದಾರುಣ ಹತ್ಯೆ.**

**೧೮ ಆಗಸ್ಟ್ ೧೯೮೮– ಪಾಕಿಸ್ಥಾನ ಅಧ್ಯಕ್ಷ ಜ. ಜಿಯಾ ಉಲ್ ಹಕ್ ಸಾವು.**

**೨೧ ಮೇ ೧೯೯೧ ರಾಜೀವ ಗಾಂಧಿ ಭೀಕರ ಹತ್ಯೆ,.**

**೧೯ ಎಪ್ರಿಲ್ ೧೯೯೯ ವಾಜಪೇಯಿ ಸರಕಾರ ಪತನ.**

**10 ದಶಂಬರ ೧೯೯೭ ಕಡಲ ತೀರದ ಭಾರ್ಗವ ಡಾ.ಶಿವರಾಮ ಕಾರಂತ ಅಸ್ತಂಗತ..**

–ಇವೆಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳ ಶೀರ್ಷಿಕೆಗಳು. ಇತಿಹಾಸದ, ಕಾಲದ ಮರು ಓದು. 'ಸುಮಾರು ಮೂರು ಸಾವಿರಕ್ಕೂ ಮಿಕ್ಕಿ ಪತ್ರಿಕೆಗಳಿವೆ. ಅದರಲ್ಲಿ ಘಟನೆಯನ್ನಾಧರಿಸಿದವೂ ಇವೆ' ಎಂದು ಮಾತಿಗಿಳಿದರು – ಪತ್ರಿಕೆಗಳ ಸಂಗ್ರಹಕಾರ, ಕೃಷಿಕ, ಉಪನ್ಯಾಸಕ ವದ್ವ ವೆಂಕಟ್ರಮಣ ಭಟ್.

ಮೂರು ದಶಕಗಳ ಪ್ರವೃತ್ತಿ. ಕ್ರಿಕೆಟ್‌ನಿಂದ ವಿಜ್ಞಾನದ ತನಕ ವಿವಿಧ ವೈವಿಧ್ಯ ವಿಚಾರಗಳು ಆರಂಭದ ದಿವಸಗಳಲ್ಲಿ ಬೀಸು ನಡೆಯಲ್ಲಿ ಬತ್ತಳಿಕೆ ಸೇರಿತು. ವಿಟ್ಲದಲ್ಲಿ (ದ.ಕ.ಜಿಲ್ಲೆ) ಉಪನ್ಯಾಸಕನಾಗಿದ್ದಾಗ ಶಾಲೆಯಲ್ಲಿ ಜರುಗಿದ ಶಂಕರ ಪ್ರಸಾದ ಕುಂಚಿನಡ್ಕ ಇವರ ಪತ್ರಿಕಾ ಸಂಗ್ರಹ ಪ್ರದರ್ಶನದಿಂದ ಸಂಗ್ರಹಾಸಕ್ತಿ ಆರಂಭ. ಮತ್ತೆ ಈ ಹವ್ಯಾಸಕ್ಕೆ ವಿಶ್ರಾಂತಿಯಿಲ್ಲ. ಸುಮಾರು ಸಾವಿರಕ್ಕೂ ಮಿಕ್ಕಿ ಪತ್ರಿಕೆಗಳನ್ನು ಶಂಕರ ಪ್ರಸಾದರೇ ನೀಡಿದ್ದಾರೆ ಎನ್ನುತ್ತಾರೆ.

ಜಿಲ್ಲೆಯ ಎಲ್ಲಾ ಪತ್ರಿಕಾ ಮಳಿಗೆಗಳಿಗೆ ಭೇಟಿ. ರೊಕ್ಕ ಕೊಟ್ಟು ಖರೀದಿಸಿದವುಗಳೇ ಅಧಿಕ. ಮನೆಗಳಿಗೆ, ಸಮಾರಂಭಗಳಿಗೆ ಹೋದಾಗ ಪತ್ರಿಕೆಗಳತ್ತ ವಿಶೇಷ ನೋಟ. ಸ್ವಲ್ಪ ಎರವಲು. ವಾರ್ತಾ ಇಲಾಖೆಯಿಂದ ಇನ್ನಷ್ಟು.. ಹೀಗೆ ಹಂತ ಹಂತವಾಗಿ ವಿವಿಧ ಟೈಟಲ್‌ಗಳ ಸಂಗ್ರಹ. ನಡೆದುಕೊಂಡು ಹೋಗುವಾಗ ಬೀದಿಯಲ್ಲಿ ಬಿದ್ದಿರುವ ಪತ್ರಿಕೆಯನ್ನೂ ಎತ್ತಿಕೊಂಡದ್ದು ಇದೆ ಎನ್ನುತ್ತಾರೆ ಭಟ್.

ರಕ್ಷಣೆಗಾಗಿ ಬಹುತೇಕ ಪತ್ರಿಕೆಗಳಿಗೆ ಪ್ಲಾಸ್ಟಿಕ್ ಅಂಗಿ. ಚೀಟಿಯಲ್ಲಿ ವಿವರಗಳು. ಜನರಿಗೆ ನೋಡುವ ಆಸಕ್ತಿಯಿಲ್ಲ. ಇಂತಹ ಸಂಗ್ರಹದ ಮಹತ್ವ ಗೊತ್ತಿಲ್ಲ ಎಂಬ ಖೇದ ವದ್ವರಿಗಿದ್ದರೂ, 'ನನ್ನ ಸಂತೋಷಕ್ಕಾಗಿ ಮಾಡುತ್ತಿದ್ದೇನೆ, ಪ್ರತಿ ವಿಷಯಕ್ಕೂ ಬೆಲೆಯಿದೆ' ಎನ್ನುವ ಖುಷಿಯೂ ಇದೆ.

ಜಾಲತಾಣಗಳಲ್ಲಿ ಸಿಗುವ ಅಂತಾರಾಷ್ಟ್ರೀಯ ಮ್ಯಾಗಜಿನ್‌ಗಳ ಮುಖಪುಟ ಇಮೇಜ್‌ಗಳನ್ನು ತನ್ನ ಕಂಪ್ಯೂಟರಿಗೆ ಇಳಿಸಿಕೊಂಡಿದ್ದಾರೆ. ಕಾಸು ಕೊಟ್ಟರೆ ಖರೀದಿಸುವ ಅವಕಾಶ ನೆಟ್‌ನಲ್ಲಿದೆ. ಅವೆಲ್ಲಾ ದುಬಾರಿ. ಕೆಲವಕ್ಕೆ ಲಕ್ಷ ರೂಪಾಯಿಗೂ ಅಧಿಕ ಮೌಲ್ಯವಿದೆ. 1665ರಿಂದೀಚೆಗಿನ ಪತ್ರಿಕೆಗಳು ನೆಟ್‌ನಲ್ಲಿ ವೀಕ್ಷಣೆಗೆ ಸಾಧ್ಯವಿದೆಯಂತೆ.

ಏನಿಲ್ಲವೆಂದರೂ ವರುಷಕ್ಕೆ ಇನ್ನೂರರಷ್ಟು ಹೊಸ ಪತ್ರಿಕೆಗಳು ಸೇರುತ್ತಿವೆ. ಪತ್ರಿಕೆಗಳಲ್ಲದೆ ವಿಶೇಷ ಸಂಚಿಕೆಗಳು, ನ್ಯೂಸ್‌ಲೆಟರ್‌ಗಳೂ ಕೂಡಾ. ಕನ್ನಡದಲ್ಲಿ ಇನ್ನೂ ಸೇರಬೇಕಾದುದು ಬಹಳಷ್ಟಿದೆ ಎನ್ನುತ್ತಾರೆ ಭಟ್.

ಕುಂಚಿನಡ್ಕ, ವದ್ವರಲ್ಲಿದ್ದಷ್ಟು ಬೃಹತ್ ಪ್ರಮಾಣದ ಪತ್ರಿಕೆಗಳ ಸಂಗ್ರಹಗಳು ಬಹುಶಃ ನಮ್ಮ ಇಲಾಖೆಯ ಕಪಾಟು ಬಿಡಿ, ಕಡತದಲ್ಲೇ ಇರಲಾರದು. ಕಳೆದ ಕಾಲದ ಕಥನವನ್ನು ಹೇಳುವ ಪತ್ರಿಕೆಗಳ ಸಂಗ್ರಹ ಕನ್ನಾಡಿಗೆ ಹೆಮ್ಮೆ. ಅದಕ್ಕೆ ಹಾಕಿದ ಮೊತ್ತ ಮರಳಿ ಬರಬೇಕೆನ್ನುವುದು ಅವರಿಗೆ ಇಚ್ಛೆಯಿಲ್ಲ. ಹೊಗಳಿಕೆ ಬೇಡ. ಬಹುಪರಾಕ್‌ನಿಂದ ದೂರ. ಆದರೆ ಸಂಗ್ರಹವನ್ನು ನೋಡುವ, ತಿಳಿಯುವ ಮನಸ್ಸುಗಳ ನಿರೀಕ್ಷೆಯಲ್ಲಿದ್ದಾರೆ.

ವದ್ವ ವೆಂಕಟ್ರಮಣ ಭಟ್ಟರಲ್ಲಿ ಚಿಟ್ಟೆ, ಜೇಡ, ಪಕ್ಷಿ.. ಮೊದಲಾದ ಪ್ರಕೃತಿ ಜೀವಿಗಳ ಅಪರೂಪದ್ದಾದ ಮೂವತ್ತು ಸಾವಿರಕ್ಕೂ ಮಿಕ್ಕಿದ ಚಿತ್ರಗಳಿವೆ. ಅದರಲ್ಲಿ ಬಹುತೇಕ ತನ್ನ ಮನೆಯ ಸುತ್ತ ಮುತ್ತ ತೆಗೆದವುಗಳೇ. ಏನಿಲ್ಲವೆಂದರೂ ವಾರಕ್ಕೆ ಐನೂರು ಚಿತ್ರ ಕ್ಲಿಕ್ ಆಗುವುದಂತೂ ಖಚಿತ! ಅಂದ ಹಾಗೆ ನಮ್ಮ 'ಸುಧಾ'ದ ಮೊದಲ ಸಂಚಿಕೆ ಗಮನಕ್ಕೆ ಬಂತು. ಆಗ ಮುಖಬೆಲೆ ಐವತ್ತು ಪೈಸೆ!